# ವಾಲಿಬಾಲ್ ಮತ್ತು ಥ್ರೋ ಬಾಲ್ ಪಂದ್ಯಾವಳಿ

**ಚಿತ್ರದುರ್ಗ, ಜೂ. 23 :** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ ಹಾಗೂ ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮತ್ತು ಎಸ್.ಜೆ.ಎಂ. ದಂತ ಮಹಾವಿದ್ಯಾಲಯ ಚಿತ್ರದುರ್ಗ ಇವರ ಸಂಯುಕ್ತಾಶ್ರಯದಲ್ಲಿ ಪುರುಷರು ಮತ್ತು ಮಹಿಳೆಯರ ರಾಜ್ಯಮಟ್ಟದ ವಾಲಿಬಾಲ್ ಮತ್ತು ಥ್ರೋ ಬಾಲ್ ಕ್ರೀಡಾಕೂಟವನ್ನು ದಿನಾಂಕ 19-06-2022ರಿಂದ 22-06-2022ರವರೆಗೆ ಆಯೋಜಿಸಲಾಗಿತ್ತು.

ಈ ಪಂದ್ಯಾವಳಿಯ ಉದ್ಘಾಟನಾ ಸಮಾರಂಭವನ್ನು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ದಿ. 20ರಂದು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಎಂ.ಆರ್. ರವಿಕುಮಾರ್ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಅನೂಪ್ ಡಿ. ಕೋಸ್ಟಾ, ಏಕಲವ್ಯ ಪ್ರಶಸ್ತಿ ಪುರಸ್ಕೃತ ಅಂತಾರಾಷ್ಟ್ರೀಯ ವಾಲಿಬಾಲ್ ಆಟಗಾರರು ಮತ್ತು ಮೊಹಮದ್ ಮುಹಿಬುಲ್ಲಾ, ಜಿಲ್ಲಾ ವಾಲಿಬಾಲ್ ತರಬೇತುದಾರ ಮತ್ತು ವಿಶ್ವವಿದ್ಯಾಲಯದ ವೀಕ್ಷಕರಾದ ಡಾ. ಎಂ.ಪಿ. ಜೋಯಲ್ ಇವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಎಸ್.ಜೆ.ಎಂ. ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್. ಮೋಹನ್‌ಕುಮಾರ್, ಡಾ. ಪ್ರಶಾಂತ್ ಜಿ., ಡಾ. ಪಾಲಾಕ್ಷಯ್ಯ ಎಲ್., ಡಾ. ಬಿ. ವಸಂತಶೆಟ್ಟಿ, ಡಾ. ನಾರಾಯಣಮೂರ್ತಿ ಸಿ. ಡಾ. ಗೌರಮ್ಮ, ಸಂಘಟನಾ ಕಾರ್ಯದರ್ಶಿ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಡಾ. ಅಭಯ್ ಪ್ರಕಾಶ್ ಸಿ. ಮತ್ತು ಶ್ರೀಮತಿ ಜಗದೀಶ್ವರಿ ಉಪಸ್ಥಿತರಿದ್ದರು.

ಈ ಪಂದ್ಯದ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಗಳಿಗೆ ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ|| ಪ್ರಶಾಂತ್ ಜಿ., ಎಸ್.ಹೆಚ್. ಪ್ರಕಾಶ್, ರಿಜಿಸ್ಟ್ರಾರ್, ಸತ್ಯನಾರಾಯಣ್, ಮ್ಯಾನೇಜರ್, ಬಸವೇಶ್ವರ ಆಸ್ಪತ್ರೆ ಹಾಗೂ ಎಸ್.ಜೆ.ಎಂ. ದಂತ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಆರ್. ಗೌರಮ್ಮ, ಡಾ. ನಾಗರಾಜಪ್ಪರವರು ಬಹುಮಾನಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಸಂಘಟನಾ ಕಾರ್ಯದರ್ಶಿ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಡಾ. ಅಭಯ್ ಪ್ರಕಾಶ್ ಸಿ. ಮತ್ತು ಶ್ರೀಮತಿ ಜಗದೀಶ್ವರಿ ಹಾಗೂ ವಿಶ್ವವಿದ್ಯಾಲಯದ ವೀಕ್ಷಕರಾದ ಡಾ. ಎಂ.ಪಿ. ಜೋಯಲ್, ಗೋಪಾಲ್ ಕೃಷ್ಣ ಮತ್ತು ಮಹೇಶ್ ಉಪಸ್ಥಿತರಿದ್ದರು.









## ವಿಜೇತ ತಂಡಗಳ ಪಟ್ಟಿ ಈ ಕೆಳಗಿನಂತಿದೆ.

**ವಾಲಿಬಾಲ್ ಪುರುಷರ ವಿಭಾಗದ ಫಲಿತಾಂಶ**

ಆರ್.ವಿ. ಕಾಲೇಜ್ ಆಫ್ ಫಿಜಿಯೋಥೆರಪಿ, ಬೆಂಗಳೂರು (ಪ್ರಥಮ)

ಗದಗ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಗದಗ (ದ್ವಿತೀಯ)

**ವಾಲಿಬಾಲ್ ಮಹಿಳೆಯರ ವಿಭಾಗದ ಫಲಿತಾಂಶ**

ಎಂ.ಎಸ್. ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಂಗಳೂರು (ಪ್ರಥಮ)

ಮೈಸೂರು ಮೆಡಿಕಲ್ ಕಾಲೇಜು ಮತ್ತು ರಿಸರ್ಚ್ ಸೆಂಟರ್, ಮೈಸೂರು (ದ್ವಿತೀಯ)

**ಥ್ರೋಬಾಲ್ ಪುರುಷರ ವಿಭಾಗದ ಫಲಿತಾಂಶ**

ಮೈಸೂರು ಮೆಡಿಕಲ್ ಕಾಲೇಜು, ಮೈಸೂರು (ಪ್ರಥಮ)

ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ (ದ್ವಿತೀಯ)

**ಥ್ರೋಬಾಲ್ ಮಹಿಳೆಯರ ವಿಭಾಗದ ಫಲಿತಾಂಶ**

ಶಿವಮೊಗ್ಗ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಶಿವಮೊಗ್ಗ

ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ (ದ್ವಿತೀಯ)